ಹರಾಜಿನ ಷರತ್ತುಗಳು–1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮಕ್ತುಂಗಳ 34, 35ನೇ ನಂಬರ್ ಗೆಜೆಟ್ ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ತಾರೀಖು 21ನೇ ಸೆಪ್ಟಂಬರು 1889.

ಈ ಕೆಳಗೆ ನಮೂದಾಗುವ ಆನೆಗಳು ಮತ್ತು ಹರಾಜ್ ತಾರೀಖಿನವರಿಗೆ ಹಿಡಿಯಲ್ಪಡುವ ಆನೆಗಳು ಸಹ 1889ನೇ ಇಸವಿ ನವಂಬರು ತಾರೀಖು 4ರಲ್ಲು ಮೈಸೂರಿನಿಂದ 30 ಮೈಲಿ ಫಾಸಲೆಯಲ್ಲಿ ಇರುವ ಹೆಗ್ಗಡದೇವನ ಕೋಟೇ ತಾಲ್ಲೂಕು ಹಂಪಾಪುರದ ಬೊಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕಂಸರ್ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಹೆಸರು.	ಜಾತಿ.	ಯೆತ್ತರ.		ಹಿಡದ ತಾರೀಖು.	ಷರಾ.
			ಅಡಿ	ಅಂಗುಲ		
1	ಬಲರಾಮ	ಗಂಡು	5	2	88ನೇ ಡಿಸಂಬರ್ ತಾರೀಖು 2	
2	ಕೃಷ್ಣ	ಡಿಟೋ	4	..	22—6—89	

ಷರತ್ತುಗಳು—ಸರ್ಕಾರ ಹರಾಜ್ ಕೈದಾವ ಕೂಡ್ಲೆ ಚಡ ದರಖಾಸ್ತುದಾರನು ಹೆರಾಜ್ ಮೊಬಲಗಿನ ಮೇಲೆ ಕೇಕಡಾ 25 ರೂಪಾಯಿ ಕೇವಣಿಯನ್ನ ಪಾವತಿಮಾಡತಕ್ಕದ್ದು. ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳವೊಳಗಾಗಿ ಪಾವತಿಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಕೇವಣಿ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲಾಗುತ್ತೆ ಮತ್ತು ಸದರೀ ಆನೆಗಳು ಪುನಹಾ ಹರಾಜ್ ಮಾಡುವದರಲ್ಲಿ ಮೊಂಟಾಗಬಹುದಾದ ಲುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ. ನಭೇ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲಾ ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯಿತು ತಗಲುವ ಖರ್ಚು ವಹಿಸಬೇಕು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 743.

ನಿಡ್ಲಘಟ್ಟ ತಾ|| ಜಂಗಂಕೋಟೆಯಲ್ಲಿ ಇದ್ದು ಮೃತಪಟ್ಟ ಕೃಷ್ಣಂಭಟ್ಟ ಮತ್ತು ಈತನ ಹೆಂಚತಿ ಪಾರ್ವತಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಪುಟ್ಟಮ್ಮಣಮ್ಮ, ಮೃತಪಟ್ಟ ಸದರೀ ಕೃಷ್ಣಂಭಟ್ಟ ಪಾರ್ವತಮ್ಮಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೊಡ್ಡಬಳ್ಳಾಪುರ ತಾ|| ಪುಜನಿ ಹೊಸಹಳ್ಳೀಲಿರುವ ಪುಟ್ಟಮ್ಮಣಮ್ಮನು ಜಂಗಂಕೋಟೇ ವಾಸಸ್ಥರಾಗಿ ಮೃತಪಟ್ಟ ಕೃಷ್ಣಂಭಟ್ಟ ಮತ್ತು ಪಾರ್ವತಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಪುಟ್ಟಮ್ಮಣಮ್ಮನ ಅರ್ಜಿಯನ್ನು 1889ನೇ ಇಸವಿ ನವಂಬರ್ ತಿಂಗಳು ತಾರೀಖು 1ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಂಭಟ್ಟ ಪಾರ್ವತಮ್ಮನ ಆಸ್ತಿಗೆ ಹಕ್ಕುದಾರರಾದ ವಿಷಪ್ಪರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಸೆಪ್ಟಂಬರ್‌ತಿಂಗಳು 20ನೇ ತಾರೀಖಿನಲ್ಲಿ ಕೋರ್ಟ್ ವೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಹೋಣಾಗಿದೆ.

1889ನೇ ಇಸವಿ ಅರ್ಜೀ ನಂಬರ್ 763.

ಬೆಂಗಳೂರು ಗವುಡನ ಪ್ಯಾಟೇಲಿ ಇದ್ದು ಮೃತಪಟ್ಟ ಸಂಪಿಗೆಪ್ಪನ ಮಗ ಮುನಿಯಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮುನಿಯಮ್ಮ, ಮೃತಪಟ್ಟ ಸದರೀ ಮುನಿಯಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಗವುಡನಪ್ಯಾಟೇ ಸ್ಥಳದ ಮುನಿಯ್ಯನು ಬೆಂಗಳೂರು ಗವುಡನಪ್ಯಾಟೇ ವಾಸಸ್ಥರಾಗಿ ಮೃತಪಟ್ಟ ಸಂಪಿಗೆಪ್ಪನ ಮಗ ಮುನಿಯಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಮುನಿಯಮ್ಮನ ಅರ್ಜಿಯನ್ನು 1889ನೇ ಇಸವಿ ನವಂಬರ್ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 765.

ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನಿನಲ್ಲಿ ಇದ್ದು ಮೃತಪಟ್ಟ ಮಾಂದಾಳೀ ಚಿಕ್ಕರಂಗಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮಾಂದಾಳಪ್ಪ, ಮೃತಪಟ್ಟ ಸದರೀ ಚಿಕ್ಕರಂಗಂಣನಿಗೆ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ ಸ್ಥಳದ ಮಾಂದಾಳಪ್ಪನು ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ ವಾಸಸ್ಥರಾಗಿ ಮೃತಪಟ್ಟ ಚಿಕ್ಕರಂಗಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಾಂದಾಳಪ್ಪನ ಅರ್ಜಿಯನ್ನು 1889ನೇ ಇಸವಿ ನವಂಬರ್ ತಿಂಗಳು ತಾರೀಖು 1ರ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕರಂಗಂಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಸೆಪ್ಟಂಬರ್ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತಿನಿಂದ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ಕುಂಚಿಗರಪ್ಯಾಟೇಲಿರುವ ಬಡಗಿ ಕೆಲಸದ ತಿಮ್ಮಯ್ಯನ ವಿಷಯದಲ್ಲಿ—

ಸ॥ 1889ನೇ ಇಸವಿ ದಿವಾಳಿ ಕೇಸ್ ನಂಬರ್ 292.

ಹುಕುಂ.

ಮೇಲ್ಕಂಡ ಬಡಗಿ ತಿಮ್ಮಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜಿರಾದ ಮೆ॥ ಎಲ್. ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ಬಡಗಿ ತಿಮ್ಮಯ್ಯನ ಪರವಾಗಿ ಅಡ್ವೋಕೇಟ್ ಮೆ॥ ಕೆ. ಟಿ. ನರಸುಹ್ಮಯ್ಯಂಗಾರನ್ನೂ ಮತ್ತು ಸದರೀಯವನ ಲೇಣೇದಾರ್‌ರಾದ 1ನೇ ಯವರ ಪರಳ್ ಅಡ್ವೋಕೇಟ್ ಮೆ॥ ಎ. ನರಸುಹ್ಮಯ್ಯಂಗಾರ್‌ರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು, ತಮಗೆ ಈ ದರ್ಯಾಫ್ತೀ ನೋಟೀಸು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—2ನೇ ಕ್ರಡಿಟ್ಟರು ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಬಡಗಿ ತಿಮ್ಮಯ್ಯನು ಹೊಂದುವಷಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾಬವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀ ಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ॥ 1889ನೇ ಇಸವಿ ಸೆಪ್ಟಂಬರು 20ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ನಮ್ಮದಸ್ತಖತ್ತಿನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ವಾವಾದಾರ್ಥ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಪೊಬಲಗು.			ಯಾವಾಗ ದೇಣೆ ತೀರಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಟಿಪ್ಪಣಿ.
1	ಬೆಂಗಳೂರು ಲಾಲ್‌ಬಾಗ್ ಪುಷ್ಪಾರಹಳ್ಳಿಲಿರುವ ಪಟೇಲ್ ವೆಂಕಟರಮಣಪ್ಪನ ಅಳಿಯ ಮುನಿಪ್ಪ ..	202	8	0	..	ಬೆಂಗಳೂರ ಮುನಿಸಿಫ್ ಕೋರ್ಟು 1888ನೇ ಅ॥ 658ನೇ ಡಿಕ್ರಿ ಪೊಬಲಗು ಪತ್ರದ ಬಾಬತು ವಸೂಲ್ ಜಾತಾ ಬಾಕಿ	
2	ಬೆಂಗಳೂರು ರಣವೀರಕಟ್ಟೆ ವ್ಯಾಟೆಯಲ್ಲಿರುವ ಮಾರಂಣನ ಮಗ ಕೆಂಚಪ್ಪ ..	50	0	0	..		
	ಜುಮ್ಲಾ	252	8	0			